ಶ್ರೀ ಕೆ. ಲಕ್ಕಪ್ಪ :– ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ, ಪ್ರೋಗ್ರಾಂ ಮಾಡಿದ್ದೇವೆಂದು ಹೇಳಿದ್ದಾರೆ, ಈ ರೀತಿ ಹೇಳಿದ ಮೇಲೆ, ಇನ್ನೇನು ಮಾಡಬೇಕು.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ :– ಇದಕ್ಕಾಗಿ ಸರ್ಕಾರ ಇದುವರೆವಿಗೆ ಎಷ್ಟು ಹಣವನ್ನು ಖರ್ಚು ಮಾಡಿದೆ ಎಂದು ಕೇಳಿದ್ದಕ್ಕೆ, "ಉದ್ಭವಿಸುವುದಿಲ್ಲ" ಎಂದು ಉತ್ತರ ಹೇಳಿದ್ದಾರೆ. ಇವರು ಯಾವಾಗಲೂ ಎಸ್.ಸಿ.ಎಸ್.ಟಿ ಎಂದು ಹೇಳುತ್ತಾರೆ...

ಶ್ರೀ ಆರ್. ಧರ್ಮಸಿಂಗ್ :– ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಮೊನ್ನೆ 28ನೇ ತಾರೀಖಿನ ದಿವಸ ಸಂಪುಟದ ಸಭೆಯಲ್ಲಿ ಅಂಬೇಡ್ಕರ್ ಜನ್ಮಶತಾಬ್ದಿ ಬಗ್ಗೆ ಜನರ ನಿರೀಕ್ಷಣೆಗೆ ಮೀರಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದೂ, ಅದಕ್ಕೆ ಇಷ್ಟು ಹಣವನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದೆ. ಮತ್ತು ಈಗಾಗಲೇ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ರಚನೆ ಮಾಡಲಾಗಿದೆ, ಅವರು ಏನು ಹೇಳುತ್ತಿದ್ದಾರೆ, ಕಾಂಗ್ರೇಸ್ ಪಕ್ಷ, ಅಂಬೇಡ್ಕರ್‌ರವರ ಬಗ್ಗೆ ಹೆಚ್ಚಿನ ಕಾರ್ಯ ಕ್ರಮಹಾಕಿಕೊಂಡಿಲ್ಲವೆಂದು ಏನು ಅವರ ಮನಸ್ಸಿನ ಕಳವಳ ಇದೆ, ಅವರ ನಿರೀಕ್ಷಣೆಗೂ ಮೀರಿ, ಪರಿಣಾಮಕಾರಿ ಕಾರ್ಯಕ್ರಮಗಳನ್ನು ಸರ್ಕಾರ ತೀವ್ರತರವಾಗಿ, ಬಹಳ ಶೀಘ್ರದಲ್ಲಿ ಹಾಕಿಕೊಂಡಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ :– ಇದಕ್ಕಾಗಿ ಸರ್ಕಾರ ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದೆ ಎಂದು ಕೇಳಿದ್ದಕ್ಕೆ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದಾರೆ. ಇದರ ಅರ್ಥ ಏನು?

ಶ್ರೀ ಬಿ. ಶಿವಣ್ಣ :– ಇನ್ನು ಎರಡು ಮೂರು ದಿವಸದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೇಲೆ ನಡೆದ ಹಲ್ಲೆಗಳು

620. ಶ್ರೀ. ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990–91ರಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಮೇಲೆ ಆಗಿರುವ ಹಲ್ಲೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಕೇಸುಗಳನ್ನು ದಾಖಲು ಮಾಡಲಾಗಿದೆ?

ಇ) ಸಿ.ಆರ್.ಇ. ಸೆಲ್ ವಿಚಾರಣೆ ಮಾಡಿರುವ ಪ್ರಕರಣಗಳೆಷ್ಟು?

ಈ) ಸಿ.ಆರ್.ಇ. ಸೆಲ್ ಮುಂದೆ ಬಾಕಿ ಇರುವ ಪ್ರಕರಣಗಳೆಷ್ಟು ?

ಉ) ಸಿ.ಆರ್.ಇ. ಸೆಲ್‌ನಲ್ಲಿ ಸಿಬ್ಬಂದಿ ಕೊರತೆ ಇದೆಯೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):–

ಅ) 297 (1–1–90 ರಿಂದ 31–10–90ರವರೆಗೆ)

ಆ) ಈ ಎಲ್ಲಾ 297 ಪ್ರಕರಣಗಳಲ್ಲಿ ಮೊಕದ್ದಮೆ ದಾಖಲು ಮಾಡಲಾಗಿದೆ.

ಇ) ಸಿ.ಆರ್.ಇ. ಸೆಲ್ ಯಾವುದೇ ಪ್ರಕರಣವನ್ನು ತಾನಾಗಿಯೇ ನೋಂದಾಯಿಸಿಕೊಂಡು ವಿಚಾರಣೆ ಮಾಡುತ್ತಿಲ್ಲ. ಆದರೆ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ಪ್ರಕರಣಗಳ ತನಿಖೆಯನ್ನು ಸ್ಥಳೀಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಪ್ರಕರಣದ ಗಂಭೀರತೆಯ ಆಧಾರದ ಮೇರೆಗೆ ತನಿಖೆಯನ್ನು ಕೈಗೊಳ್ಳುವರು. ಜಿಲ್ಲಾ ಪೋಲೀಸ್ ಅಧಿಕಾರಿಗಳು ಮತ್ತು ಪೋಲೀಸ್ ಕಮೀಷನರ್‌ಗಳು ಈ ಪ್ರಕರಣಗಳಲ್ಲಿ ನೋಂದಾಯಿಸಲ್ಪಟ್ಟ ಮೊಕದ್ದಮೆಗಳ ವಿವರಗಳನ್ನು ಸಿ.ಆರ್.ಇ. ಸೆಲ್‌ಗೆ

ಒದಗಿಸುವರು. ಯಾವುದೇ ದೌರ್ಜನ್ಯ ಪ್ರಕರಣವನ್ನು ಕ್ರಮವಾಗಿ ನೋಂದಾಯಿಸಲ್ಪಡದಿದ್ದರೆ ಅಥವಾ ಇಂತಹ ದೌರ್ಜನ್ಯ ಪ್ರಕರಣವು ಸಿ.ಆರ್.ಇ. ಸೆಲ್ ಗಮನಕ್ಕೆ ಬಂದಲ್ಲಿ: ತರಲ್ಪಟ್ಟಲ್ಲಿ ಅಂತಹ ಪ್ರಕರಣಗಳಲ್ಲಿ ಸ್ಥಳೀಯ ಪೋಲೀಸರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ.

ಈ) ಯಾವುದೇ ಪ್ರಕರಣಗಳು ಸಿ.ಆರ್.ಇ.ಸೆಲ್‌ನ ಮುಂದೆ ಬಾಕಿ ಇರುವುದಿಲ್ಲ.

ಉ) ಇಲ್ಲ. ಆದಾಗ್ಯೂ ಬಲಪಡಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಮಾನ್ಯ ಉಪಾಧ್ಯಕ್ಷಣೀಯವರೇ ಉತ್ತರ ಬಹಳ ಆಶ್ಚರ್ಯಕರವಾಗಿದೆ. 1990–91ನೇ ಜನವರಿ ಒಂದನೇ ತಾರೀಖು 1990 ರಿಂದ 31–10–90ರ ವರೆಗೆ ರಾಜ್ಯದಲ್ಲಿ 297 ಪ್ರಕರಣಗಳು ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಮೇಲೆ ಆಗಿರತಕ್ಕಂಥ ಹಲ್ಲೆಗಳು ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಆದರೆ ಮಾನ್ಯ ಅಧ್ಯಕ್ಷಣೀಯವರೇ ತಾವು ಈ ಕಡೆ ಸ್ವಲ್ಪ ಗಮನ ಕೊಡಬೇಕು. ಈ ಸದನ ಒಂದು ದಿವಸ ನಡೆದರೆ ಅಲ್ಲಿ ಒಬ್ಬರ ಮೇಲೆ ಹಲ್ಲೆ ಆಗಿದೆ ಎಂದು ಅರ್ಥ. ಪ್ರತಿನಿತ್ಯ ಸಹ ನಮ್ಮ ರಾಜ್ಯದಲ್ಲಿ ಅವ್ಯಾಹತವಾಗಿ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಮೇಲೆ ಹಲ್ಲೆ ನಡೆಯುತ್ತಿದೆ. ಇವತ್ತು ಬೆಳಿಗ್ಗೆ ಅಧಿವೇಶನ ಇಲ್ಲಿ ಪ್ರಾರಂಭ ಆಯಿತು ಎಂದರೆ ಅಲ್ಲಿ ಯಾರಿಗೋ ಒಬ್ಬರನ್ನು ತುಳಿದರು ಎಂದು ಅರ್ಥವೇ? ಇದು ದಾಖಲಾಗಿರತಕ್ಕಂಥ ಪ್ರಕರಣಗಳು. ಇನ್ನು ದಾಖಲಾಗದೆ ಇರತಕ್ಕಂಥ ಪ್ರಕರಣಗಳು ಎಷ್ಟು ಇರಬೇಕು? ಅವರ ಕೂಗು ಈ ಸರ್ಕಾರಕ್ಕೆ ಏನಾದರೂ ಕೇಳಿಸುತ್ತಿದೆಯೇ? ತಾವು ಅಂಬೇಡ್ಕರ್ ಜಯಂತಿ ವಿಚಾರದಲ್ಲಿ ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳು ಸಚಿವ ಸಂಪುಟದ ಮುಂದೆ ಇರತಕ್ಕಂಥ ವಿಚಾರಗಳು ಅದಕ್ಕೆ ತಾವು ಕೊಡತಕ್ಕಂಥ ಹಣ ನಾನು ಕೇಳುತ್ತಿಲ್ಲ. ಅದಕ್ಕೆ ಒಂದು ಹೆಜ್ಜೆ ಹಿಂದೆ ನಾನು ಹೋಗಿದ್ದೇನೆ. ಕೊನೆಯ ಪಕ್ಷ ತಾವು ಕಾರ್ಯಕ್ರಮ ಹಾಕಿಕೊಳ್ಳುತ್ತೀರೋ ಬಿಡುತ್ತೀರೋ ನಾನು ಅದನ್ನು ಕೇಳುತ್ತಿಲ್ಲ. ಈ ದೌರ್ಜನ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಅಥವಾ ಕಡಿಮೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ತಾವು ಹಾಕಿಕೊಳ್ಳುತ್ತೀರಾ? ತಾವು ಹೊಸದಾಗಿ ಗೃಹ ಇಲಾಖೆ ಜವಾಬ್ದಾರಿ ತೆಗೆದುಕೊಂಡಿದ್ದೀರಿ. ಇದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯ ಪ್ರಶ್ನೆ ಏನೆಂದರೆ ಈ ಸಿ.ಆರ್.ಇ. ಸೆಲ್ ಮುಂದೆ ಯಾವುದೇ ಪ್ರಕರಣಗಳನ್ನು ತಾವಾಗಿಯೇ ನೋಂದಾಯಿಸಿಕೊಳ್ಳುವ ವಿಚಾರ ಮಾಡಿಲ್ಲ, ಈ ಉತ್ತರ ಅಧಿಕಾರಿಗಳಿಂದ ಬರತಕ್ಕಂಥಾದ್ದು. ಈ ಅಧಿಕಾರಿಗಳ ಉತ್ತರವನ್ನು ನಾನು ತೆಗೆದುಕೊಂಡು ಹೋಗುವುದಕ್ಕೆ ಈ ಸದನಕ್ಕೆ ಬಂದಿಲ್ಲ. ಈ ಸಿ.ಆರ್.ಇ. ಸೆಲ್ ಕೇವಲ 4 ಜನರ ಅಧಿಕಾರಿಗಳ ಫಾಲ್ಸ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದನ್ನೇ ವಿಚಾರಣೆ ಮಾಡುವುದಕ್ಕೆ ಅಷ್ಟಕ್ಕೆ ಅಲ್ಲ ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆ. ದಿವಂಗತ ಶ್ರೀ ದೇವರಾಜ ಅರಸ್‌ರವರು ಈ ಸಿ.ಆರ್.ಇ. ಸೆಲ್ ಅನ್ನು ಪ್ರಾರಂಭ ಮಾಡಿದಂತಹ ಸಂದರ್ಭದಲ್ಲಿ ಯಾವ ಉದ್ದೇಶವನ್ನು ಇಟ್ಟುಕೊಂಡು ಇದನ್ನು ಸ್ಥಾಪನೆ ಮಾಡಿದರೋ ಆ ಉದ್ದೇಶ ಇವತ್ತು ಸಫಲವಾಗಲಿಲ್ಲ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮತ್ತೊಂದು ಏನೆಂದರೆ ಇದು ಹಳೆಯ ಉತ್ತರ. ಆದಾಗ್ಯೂ ಇದನ್ನು ಬಲಪಡಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿ ಇದೆ ಎಂದು. ಈ ಉತ್ತರ ರೆಡಿ ಮಾಡಿ ಇಟ್ಟು ಕೊಂಡಿರುತ್ತಾರೆ. ಈ ಸಿ.ಆರ್.ಇ. ಸೆಲ್‌ಗೆ ಒಬ್ಬ ದಕ್ಷ ಪ್ರಾಮಾಣಿಕ ಅಧಿಕಾರಿಯನ್ನು ನಾವು ಹೆಡ್ ಎಂದು ಮಾಡಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ಕೊಡುತ್ತಾರೆ. ಈ ಸಿ.ಆರ್.ಇ. ಸೆಲ್ ಅನ್ನು ಸ್ಟೆಂತನ್ ಮಾಡುತ್ತೇವೆಂದರೆ ಕೇಂದ್ರ ಸರ್ಕಾರದಿಂದ ಹಣ ಕೊಡುತ್ತಾರೆ. ರಾಜ್ಯ ಸರ್ಕಾರ ಕೂಡ ಇದಕ್ಕೆ ಹಣ ಕೊಟ್ಟು ಸ್ಟೆಂತನ್ ಮಾಡಿದರೆ ಸ್ಥಳೀಯ ಪೋಲೀಸರು ಏನು ದಾಖಲೆ ಮಾಡಿಕೊಳ್ಳುತ್ತಾರೆ ಅದಕ್ಕಿಂತ ಹೆಚ್ಚಿನ ಕೆಲಸನ್ನು ಇವರು ಮಾಡಬಹುದು. ಇದನ್ನು ಯಾವಾಗ ಮಾಡುತ್ತೀರಿ? ಮುಂದಿನ ಗೃಹ ಸಚಿವರು ಮುಖ್ಯ ಮಂತ್ರಿಗಳು ಬರುವವರೆವಗೂ ಇದು ಪರಿಶೀಲನೆಯಲ್ಲಿಯೇ ಇರುತ್ತದೆಯೇ ಅಥವಾ ಇದಕ್ಕೆ ಏನಾದರೂ ಮಹತ್ವ ಕೊಟ್ಟು ತಕ್ಷಣ ಇದನ್ನು ಇನ್ನೊಂದು 6 ತಿಂಗಳ ಒಳಗೆ ಅಥವಾ ಏಪ್ರಿಲ್ ಒಳಗೆ ಅಥವಾ 1992ರ ಡಿಸೆಂಬರ್ ಒಳಗೆ ಮಾಡತಕ್ಕಂಥ ಭರವಸೆ ಕೊಡುವುದಕ್ಕೆ ಸಾಧ್ಯವೆ?

ಶ್ರೀ ಧರ್ಮ ಸಿಂಗ್ :– ಮಾನ್ಯ ಅಧ್ಯಕ್ಷಣೀಯವರೇ ಈಗಾಗಲೇ ಮಾನ್ಯ ವಿರೋಧಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯರವರು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ ಎಂದರೆ ಅವರು ಕೇಳಿದ ಪ್ರಶ್ನೆ ಏನೆಂದರೆ

ಜನವರಿಯಿಂದ ಅಕ್ಟೋಬರ್ ವರೆಗೆ ಎಷ್ಟು ದೌರ್ಜನ್ಯಗಳು ಈ ವರ್ಗದ ಜನರ ಮೇಲೆ ನಡೆದವು ಎಂದು. ಆದಕ್ಕೆ ನಾವು ಉತ್ತರ ಕೊಟ್ಟು 297 ದೌರ್ಜನ್ಯ ಕೇಸ್‌ಗಳನ್ನು ರಿಜಿಸ್ಟರ್ ಮಾಡಿಕೊಂಡಿದ್ದೇವೆಂದು ಹೇಳಿದ್ದೇವೆ. ಅಂದರೆ 300 ದಿನಗಳಿಗೆ 300 ರ ಪ್ರಕಾರ. ಒಂದು ದಿನಕ್ಕೆ ಒಂದು ಪ್ರಕರಣ ಆಗುತ್ತದೆ ಮತ್ತೊಂದು ಪ್ರಶ್ನೆಯನ್ನು ಮಾನ್ಯ ಉಪನಾಯಕರು ಕೇಳಿದ್ದಾರೆ ಅದೇನೆಂದರೆ ಈ ಸಿ. ಆರ್.ಇ. ಸೆಲ್ ಸ್ಟೆಂತನ್ ಮಾಡುವುದಕ್ಕೆ ಸಿಬ್ಬಂದಿ ಇಲ್ಲ ಎಂದು. ಸ್ಟೆಂತನ್ ಮಾಡುವುದಕ್ಕೆ ಏನು ಕಾರ್ಯಕ್ರಮ ಇದೆ ಎಂದು ಕೇಳಿದ್ದಾರೆ. ನಿನ್ನೆ ಸಾಯಂಕಾಲ 7–30 ಘಂಟೆಗೆ ಈ ಪ್ರಶ್ನೆ ಬಂತು. ನಾನು ರಾತ್ರಿ 9–30 ಗಂಟೆವರೆಗೆ ಸಂಬಂಧಪಟ್ಟ ಡಿ.ಜಿ. ಮತ್ತು ಹೋಮ್: ಕಮೀಷನರ್ ಜೊತೆಯಲ್ಲಿ ಮಾತನಾಡಿದ್ದೇನೆ. ಇದಕ್ಕೆ ಬರತಕ್ಕಂಥ ಹಣ ಕೇಂದ್ರ ಸರ್ಕಾರದಿಂದ 50 ಪರ್ಸೆಂಟ್ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ 50 ಪರ್ಸೆಂಟ್ ಬರುತ್ತದೆ. ನಾವು ಈಗಾಗಲೇ ಸುಮಾರು 61 ಲಕ್ಷರೂಪಾಯಿಗಳನ್ನು ಮಾತ್ರ ತೆಗೆದುಕೊಂಡಿದ್ದೇವೆ. ಈ ಹಣ ಏನೇನು ಸಾಕಾಗುವುದಿಲ್ಲ. ತಾವು ಹೇಳತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ರಿಜಿಸ್ಟರ್ ಆಗಿರತಕ್ಕಂಥ ಕೇಸ್‌ಗಳು 297. ದಿನನಿತ್ಯ ದೌರ್ಜನ್ಯಗಳು ಆಗುತ್ತಿವೆ ಈ ಬಗ್ಗೆ ಸರ್ಕಾರದ ಕಾರ್ಯಕ್ರಮ ಏನು, ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಮತ್ತು ಸಿ. ಆರ್.ಇ. ಸೆಲ್ ಇದರ ಬಗ್ಗೆ ತಾವು ನೋಡುತ್ತಿಲ್ಲ ಮತ್ತು ಅಧಿಕಾರಿಗಳು ತಮಗೆ ಈ ಉತ್ತರ ಒದಗಿಸಿದ್ದಾರೆ ಇದೆಲ್ಲಾ ಹೇಳಿದರು. ಇವತ್ತು ಈ ಸಿ.ಆರ್.ಇ. ಸೆಲ್ ಜೊತೆಗೆ ಎಗ್ಜಿಸ್ಟಿಂಗ್ ಪೋಲೀಸ್ ಖಾತೆ ಏನು ಇದೆ. ಆ ಸಿಬ್ಬಂದಿ ಇವರಿಗೆ ಮಾನಿಟರ್ ಮಾಡುತ್ತಾರೆ. ಯಾವ ತರಹ ಕೇಸ್ ಇನ್‌ವೆಸ್ಟಿಗೇಶನ್ ಮಾಡಬೇಕು ಎನ್ನುವ ಗೈಡ್‌ಲೈನ್ಸ್ ಕೊಡತಕ್ಕಂಥಾದ್ದು ಮತ್ತೆ ಪರ್ಪೆಕ್ಯೂಲರ್ ಸೆಕ್ಷನ್ಸ್‌ಗಳಲ್ಲಿ ಕೂಡ ಯಾವ ರೀತಿ ಚಾರ್ಜಸ್ ಫ್ರೇಮ್ ಎಫೆಕ್ಟೀವ್ ಆಗಿ ಮಾಡಬೇಕೆಂದು. ಸಿ.ಆರ್.ಇ. ಸೆಲ್ ಜೊತೆಗೆ ಪೋಲೀಸ್ ಇಲಾಖೆ ಸಿಬ್ಬಂದಿ ಸಹ ಮಾಡಬೇಕಾಗುತ್ತದೆ ಇವತ್ತು ನಾವೇನು ಮಾಡಿದ್ದೇವೆ ಎಂದರೆ ರವಿನ್ಯೂ ಡಿವಿಜನ್‌ನಲ್ಲಿ ಒಬ್ಬರು ಎಸ್. ಪಿ. ಇದ್ದಾರೆ. ಒಟ್ಟು 4 ಜನ ಎಸ್. ಪಿ. ಗಳು ಇದ್ದಾರೆ. ಇವತ್ತು ಗುಲ್ಬರ್ಗಾದಲ್ಲಿ ಎಸ್.ಪಿ. ಇದ್ದಾರೆ. ರಾಯಚೂರಿನಲ್ಲಿ ಇಲ್ಲ. ಏನಾದರೂ ರಾಯಚೂರಿನಲ್ಲಿ ಅಟ್ರಾಸಿಟಿಯಾದರೆ ಗುಲ್ಬರ್ಗಾದಿಂದ ಅವರು ಬರಬೇಕಾಗುತ್ತದೆ. ಪ್ರತಿ ಜಿಲ್ಲೆಯಲ್ಲೂ ಸಿ.ಆರ್.ಇ.ಸೆಲ್ ಮಾಡಬೇಕೆಂದು ಈಗಾಗಲೇ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇದರ ಬಗ್ಗೆ ಸ್ಪೆಷಲ್ ಕೋರ್ಟ್‌ಗಳನ್ನು ಪ್ರತಿ ಜಿಲ್ಲೆಯಲ್ಲೂ ಮಾಡಬೇಕೆಂದು ಇದ್ದೇವೆ. ಈಗಾಗಲೇ ಮೈಸೂರಿನಲ್ಲಿ ಸ್ಪೆಷಲ್ ಕೋರ್ಟ್ ಇದೆ. ಎಲ್ಲೆಲ್ಲಿ ಸೆಷನ್ ಕೋರ್ಟ್‌ಗಳು ಇವೆಯೋ ಅವುಗಳನ್ನು ಸ್ಪೆಷಲ್ ಕೋರ್ಟ್‌ಗಳಾಗಿ ಮಾಡಬೇಕೆಂದಿದ್ದೇವೆ. ಇದೇ ತರಹ 20 ಜಿಲ್ಲೆಗಳಲ್ಲೂ ಸ್ಪೆಷಲ್ ಕೋರ್ಟ್‌ಗಳನ್ನು ಮಾಡತಕ್ಕಂತಾದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ತಮ್ಮ ಮನಸ್ಸಿನಲ್ಲಿ ಏನು ಕಳವಳ ಇದೆಯೋ ಅದನ್ನು ನಿವಾರಿಸಲಿಕ್ಕಾಗಿ ಹೆಚ್ಚಿಗೆ ಫಂಡ್ಸ್ ಕೊಡಬೇಕೆಂದು ನಾವು ಮಾಡುತ್ತೇವೆ. ಇದರ ಬಗ್ಗೆ ಸಮಾಜ ಕಲ್ಯಾಣ ಸಚಿವರ ಜೊತೆಯಲ್ಲಿಯೂ ನಾನು ಮಾತನಾಡಿದ್ದೇನೆ. ನಮ್ಮ ರಾಜ್ಯ ಸರ್ಕಾರವು ಇದಕ್ಕೆ ಎಷ್ಟು ಹಣವನ್ನು ಒದಗಿಸಿಕೊಡುತ್ತದೆಯೋ ಅಷ್ಟೇ ಹಣವನ್ನು ಕೇಂದ್ರ ಸರ್ಕಾರವೂ ಒದಗಿಸಿಕೊಡುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಎಲ್ಲಾ ಕಡೆ ದಿನನಿತ್ಯ ಅಟ್ರಾಸಿಟೀಸ್ ಜಾಸ್ತಿ ನಡೆಯುತ್ತಿವೆಯೆಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಿಮ್ಮ ನಿರೀಕ್ಷಣೆಗೆ ತಕ್ಕಂತೆ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವುದಕ್ಕೆ ಹೆಚ್ಚು ಸಿಬ್ಬಂದಿ ಬೇಕಾಗುತ್ತದೆ. ಹೆಚ್ಚು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ನಮಗೆ 135 ಕೋಟಿ ರೂಪಾಯಿಗಳು ಬೇಕಾಗಿದೆ. ಇನ್ನು 5 ವರ್ಷಗಳೊಳಗೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಏನು ಪ್ರಶ್ನೆ ಎತ್ತಿದ್ದಾರೆ ಅವರಿಗೆ ಇದು ಅರ್ಥವಾಗಿದೆಯೆಂದು ನಾನು ಭಾವನೆ ಮಾಡುತ್ತೇನೆ.

ಶ್ರೀ. ಪಿ.ಜಿ.ಆರ್.ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಸಚಿವರು ಎರಡು ವಿಚಾರಗಳನ್ನು ಹೇಳಿದ್ದಾರೆ. ಒಂದು, ಸಿ.ಆರ್.ಇ. ಸೆಲ್‌ಗೆ ಸಂಬಂಧಪಟ್ಟ ಹಾಗೆ ಪ್ರತಿ ಜಿಲ್ಲೆಯಲ್ಲೂ ಸಹಿತ ಎಸ್.ಪಿ.ಯವರ ಮುಖಂಡತ್ವದಲ್ಲಿ ಒಂದು ಸೆಲ್ ಮಾಡುತ್ತೇವೆ. ಮತ್ತು ಈಗಿರತಕ್ಕಂಥ ಅಂದರೆ ರೆವಿನ್ಯೂ ಡಿವಿಷನ್‌ನಲ್ಲಿರತಕ್ಕಂಥ ಕೋರ್ಟ್‌ಗಳು ಏನಿವೆ ಅವುಗಳನ್ನು ಪ್ರತಿ ಜಿಲ್ಲೆಯಲ್ಲೂ ಸಹಿತ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಮತ್ತೆ 5 ವರ್ಷಗಳಲ್ಲಿ 135 ಕೋಟಿ ರೂಪಾಯಿ ಖರ್ಚಾಗುತ್ತದೆ ಮತ್ತು ಇದರಲ್ಲಿ ಕೇಂದ್ರ ಸರ್ಕಾರವೂ ಅರ್ಧ ಭರಿಸಿಕೊಡುತ್ತದೆ ಅನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದು ಬಹಳ ಸಂತೋಷ. ಆದರೆ ನಾನು ತಮಗೆ

ಕೇಳುವುದು ಇಷ್ಟೇ, ಇದನ್ನು ಈ ವರ್ಷ ಮಾಡುತ್ತೀರಾ? ಅಂದರೆ ಏಪ್ರಿಲ್ 91ನೇ ಇಸವಿಯೊಳಗೆ ಪ್ರತಿ ಜಿಲ್ಲೆಯಲ್ಲೂ ಸಹಿತ ಎಸ್.ಪಿ.ಯವರ ಮುಖಂಡತ್ವದಲ್ಲಿ ಒಂದು ಸೆಲ್‌ನ್ನು ಮಾಡುತ್ತೀರಾ? ಮತ್ತು ಈ ಕೋರ್ಟುಗಳನ್ನು 91ರ ಮಾರ್ಚಿಯೊಳಗೆ ಮಾಡಲಿಕ್ಕೆ ಸಾಧ್ಯವೆ? ಇಲ್ಲದಿದ್ದರೆ 92ರ ಮಾರ್ಚಿಯೊಳಗೆ ಮಾಡುತ್ತೀರಾ? ಯಾವಾಗ ಮಾಡುತ್ತೀರಾ? ಎಂದು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಧರ್ಮಸಿಂಗ್ :– ಜಿಲ್ಲೆಗಳಲ್ಲಿರುವ ಸೆಷನ್ ಕೋರ್ಟ್‌ಗಳನ್ನು ಸ್ಪೆಷಲ್ ಕೋರ್ಟ್‌ಗಳನ್ನಾಗಿ ಮಾಡುವುದಕ್ಕೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಇದರ ಜೊತೆಗೆ ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕಾದರೆ 135 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಧರ್ಮವೀರ್‌ರವರ ರಿಪೋರ್ಟ್ ಪ್ರಕಾರ ನಮ್ಮ ಪೋಲೀಸ್ ಸ್ಟೇಷನ್‌ಗಳಲ್ಲಿ ಸಿಬ್ಬಂದಿ ಇಲ್ಲ. ಇದರ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಸಚಿವರೊಡನೆ ಮಾತನಾಡಿದ್ದೇನೆ. ಇದರ ಬಗ್ಗೆ ಹೆಚ್ಚಿನ ಹಣವನ್ನು ಒದಗಿಸಿಕೊಡುವುದಕ್ಕೆ ಅವರೂ ಒಪ್ಪಿದ್ದಾರೆ. ಇದೇ ರೀತಿ ಕೇಂದ್ರದಿಂದಲೂ ಹಣ ಬರುತ್ತದೆ. ಈಗಾಗಲೇ ಒಂದು ಹೈ ಲೆವೆಲ್ ಕಮಿಟಿ ರಚನೆ ಮಾಡಲಾಗಿದೆ. ಅಟ್ರಾಸಿಟಿಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿರುವ ಬಗ್ಗೆ ಹೈ ಲೆವಲ್ ಕಮಿಟಿಯವರು ಚರ್ಚೆ ಮಾಡುತ್ತಿದ್ದಾರೆ. ಹೆಚ್ಚು ಸಿಬ್ಬಂದಿ ಮಾಡಿಕೊಳ್ಳುವುದಕ್ಕೆ 1990–91ರಲ್ಲಿ 61 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಪ್ರತಿ ಡಿಸ್ಟ್ರಿಕ್‌ನಲ್ಲೂ ಸಿ.ಆರ್.ಇ.ಸೆಲ್ ಸ್ಥಾಪನೆ ಮಾಡಲಿಕ್ಕೂ ಹಣ ಬೇಕಾಗುತ್ತದೆ. ಇದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಯಾವಾಗ ಮಾಡುತ್ತೀರೆಂದು ಅಶ್ಯೂರೆನ್ಸ್ ಕೊಟ್ರೆ ಸಾಕು. ಸಿಆರ್.ಇ. ಸೆಲ್‌ನ್ನು ಮಾಡಬೇಕೆಂದು ಹೇಳಿದಾಗ ಒಬ್ಬ ಐ.ಜಿ.ಯವರನ್ನು ಒಳ್ಳೆಯ ಎಫಿಷಿಯಂಟ್ ಮತ್ತು ಆನೆಸ್ಟ್ ಆಫೀಸರನ್ನು ಹಾಕಿದ್ದೇವೆಂದು ಹೇಳಿದಿರಿ. ಈಗ ಏನು ಪ್ರಶ್ನೆ ಇದೆಯೆಂದರೆ, ಇಲ್ಲಿ ಪೋಸ್ಟಿಂಗ್ ಆಗುವವರು ಯಾರೆಂದರೆ ರಿಜೆಕ್ಟಟೆಡ್ ಎಲಿಮೆಂಟ್ಸ್. ನಾವು ಅಲ್ಲಿ ಹಾಕತಕ್ಕಂತಾದ್ದು, ಎಸ್.ಪಿ.ಯವರಾಗಲೀ. ಡಿ.ವೈ.ಎಸ್.ಪಿ.ಯವರಾಗಲೀ, ಸರ್ಕಲ್ ಇನ್ಸ್‌ಪೆಕ್ಟರ್‌ರವರಾಗಲೀ ಸಬ್ ಇನ್ಸ್‌ಪೆಕ್ಟರ್ ಆಗಲೀ, ನಮಗೆ ಬೇಡದೆ ಇರುವವರನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿಬಿಡುತ್ತೇವೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಕಮಿಟ್‌ಮೆಂಟ್: ಇರತಕ್ಕಂಥ ಆಫೀಸರ್‌ಗಳನ್ನು ಲೋಯರ್ ಲೆವಲ್‌ನಲ್ಲಿ ಹಾಕಬೇಕು ಇದರ ಬಗ್ಗೆ ತಾವು ಆಶ್ವಾಸನೆ ಕೊಡಲಿಕ್ಕೆ ಸಾಧ್ಯವೇ?

ಶ್ರೀ ಧರ್ಮಸಿಂಗ್ :– ಮಾನ್ಯ ವಿರೋಧ ಪಕ್ಷದ ಉಪ ನಾಯಕರ ಮಾತನ್ನು ನಾನು ಒಪ್ಪುತ್ತೇನೆ. ಏಕೆಂದರೆ ಸ್ವಲ್ಪ ಕಮಿಟ್ಮೆಮೆಂಟ್ ಇರತಕ್ಕಂಥ ಅಧಿಕಾರಿಗಳು ಅಲ್ಲಿಗೆ ಬೇಕು. ಜನರ ನಿರೀಕ್ಷಣ ಮಟ್ಟಕ್ಕೆ ಕೆಲಸ ಮಾಡತಕ್ಕಂಥ ಅಧಿಕಾರಿಗಳನ್ನು ನಾವು ಅಲ್ಲಿಗೆ ಹಾಕಿದ್ದೇವೆ. ಈಗಿರತಕ್ಕಂಥ ಡಿ.ಜಿ.ಯವರೂ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಮುಂದೆ ಪ್ರತಿ ಜಿಲ್ಲೆಗೆ ಎಸ್.ಪಿ. ಯವರನ್ನು ಹಾಕತಕ್ಕಂಥ ಸಂದರ್ಭದಲ್ಲೂ ಯಾರು ಚೆನ್ನಾಗಿ ಕೆಲಸ ಮಾಡುತ್ತಾರೋ ಅಂಥವರುಗಳನ್ನೇ ಹಾಕುತ್ತೇವೆ.

ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಗೃಹ ಸಚಿವರು ಹೇಳಿದರು, ಸಂತೋಷ. ಆದರೆ ಪರಿಶಿಷ್ಟ ಜಾತಿಯವರ ಮೇಲೆ ಏನು ದೌರ್ಜನ್ಯ ಆಗುತ್ತಿವೆ, ಪೋಲೀಸ್ ಅಧಿಕಾರಿಗಳಿಗೆ ತಾವು ಮಾರ್ಗದರ್ಶನ ಕೊಡಬೇಕು. ಯಾಕೆಂದರೆ ಅವರಿಗೆ ರಕ್ಷಣೆ ಇಲ್ಲ. ಪೋಲೀಸ್ ಅಧಿಕಾರಿಗಳು ಯಾರು ಬೇರೆಯವರು ಹಣ ಕೊಡುತ್ತಾರೆ, ಯಾರು ಶಕ್ತಿಯನ್ನು ಎಕ್ಸರ್‌ಸೈಜ್ ಮಾಡುತ್ತಾರೆ ಅವರಿಗೆ ರಕ್ಷಣೆ ಕೊಡುತ್ತಾರೆ. ಪರಿಶಿಷ್ಟ ಜಾತಿಯವರಿಗೆ ತೊಂದರೆ ಕೊಡುತ್ತಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಒಂದು ಕಡೆ ಹುಣಸೂರಿನ ಜಮೀನು ವಿವಾದದಲ್ಲಿ ಗಲಾಟೆ ಆಯಿತು. ನಾನು ಅಲ್ಲಿಗೆ ಹೋದಾಗ ನನಗೇ ಪೋಲೀಸರು ರಕ್ಷಣೆ ನೀಡಲಿಲ್ಲ. ಇನ್ನು ಪರಿಶಿಷ್ಟ ಜಾತಿಯವರಿಗೆ ರಕ್ಷಣೆ ನೀಡುತ್ತಾರೆಯೇ? ಇಂತಹ ಸಂದರ್ಭದಲ್ಲಿ ತಾವು ಗೃಹ ಸಚಿವರಾಗಿ ಬಂದಿದ್ದೀರಿ. ಪೋಲೀಸ್ ಅಧಿಕಾರಿಗಳಿಗೆ ಆದೇಶ ಕೊಡಬೇಕು. ಕಳೆದ ಸರ್ಕಾರ ಇದ್ದಾಗ ಬಹಳ ದೌರ್ಜನ್ಯ ಆಗಿದೆ. ಈಗ ಅದರ ಬಗ್ಗೆ ಪ್ರಸ್ತಾಪ ಬೇಡ. ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಪೋಲೀಸ್ ಅಧಿಕಾರಿಗಳು ಏನು ಇದ್ದಾರೆ ಅವರಿಗೆ ನೀವು ಮಾರ್ಗದರ್ಶನವನ್ನು ನೀಡಬೇಕಾಗುತ್ತದೆ. ಪರಿಶಿಷ್ಟ ಜಾತಿಯವರ ಕಂಪ್ಲೆಂಟ್ ಬಂದರೆ ಅವರಿಗೆ

ನೀವು ರಕ್ಷಣೆ ಕೊಡಬೇಕೆಂದು. ಆಗ ಅವರು ರಕ್ಷಣೆ ಕೊಡುತ್ತಾರೆ. ಅವರಿಗೆ ರಕ್ಷಣೆ ಕೊಡಬೇಕು ಎಂದು ಆದೇಶ ಕೊಟ್ಟರೆ ಶಿಸ್ತಾಗುತ್ತದೆ. ಹಿಂದೆ ಗರುಡಾಚಾರ್ ಅವರು ಇದ್ದಾಗ ಆ ಕಾಲದಲ್ಲಿ ಪರಿಶಿಷ್ಟ ಜಾತಿಯವರಿಗೆ ರಕ್ಷಣೆ ಕೊಡಬೇಕು ಅಥವಾ ಮಾನ್ಯತೆ ಕೊಡಬೇಕೆಂದು ಹೇಳಿದಾಗ ಅಧಿಕಾರಿಗಳು ಬಹಳ ಕಟ್ಟುನಿಟ್ಟಾಗಿ ಪರಿಶೀಲನೆ ಮಾಡಿ ನೋಡುತ್ತಿದ್ದರು. ಇವೊತ್ತು ನೀವು ಈ ರೀತಿಯ ಆದೇಶವನ್ನು ಕೊಟ್ಟರೆ ಅವರು ನೋಡುತ್ತಾರೆ. ಇಲ್ಲ ಎಂದರೆ ಅವರು ಬೇರೆಯವರಿಗೆ ಸಹಾಯ ಮಾಡುವುದು. ಇವರ ಮೇಲೆ ತೊಂದರೆ ಕೊಡುತ್ತಾರೆ. ಸ್ಟೇಷನ್‌ನಲ್ಲಿ ಹಾಕುವುದು ಲಾಕೌಟ್‌ನಲ್ಲಿ ಹಾಕಿ ಹೊಡೆಯುವುದು ಇವೆಲ್ಲಾ ಮಾಡುತ್ತಾರೆ. ಆದ್ದರಿಂದ ಕಟ್ಟುನಿಟ್ಟಾಗಿ ಪರಿಶಿಷ್ಟ ಜಾತಿಯವರಿಗೆ ರಕ್ಷಣ ಕೊಡಬೇಕೆಂದು ಸುತ್ತೋಲೆಯನ್ನು ಕಳಿಸಿದರೆ ಒಳ್ಳೆಯದು.

ಶ್ರೀ ಧರಂ ಸಿಂಗ್. ಆರ್ :– ಅವರುಗಳಿಗೆ ರಕ್ಷಣೆ ಕೊಡುತ್ತೇವೆ. ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ಏನು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ, ಸ್ಪೆಸಿಫಿಕ್ ಆಗಿ ಎಲ್ಲಿಯಾದರೂ ತೊಂದರೆ ಕೊಡುತ್ತಿರುವುದು ನನ್ನ ಗಮನಕ್ಕೆ ಬಂದರೆ ನಾನು ಆದೇಶ ಕೊಡುತ್ತೇನೆ, ಹಾಗೂ ಅದನ್ನು ಸರಿಪಡಿಸುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್:– ಸಾಮಾನ್ಯವಾಗಿಯೂ ತೊಂದರೆ ಕೊಡುತ್ತಿದ್ದಾರೆ. ನಾನು ಸ್ಪೆಸಿಫಿಕ್ ಆಗಿಕೊಡುತ್ತೇನೆ. ತಾವು ಜನರಲ್ ಸೂಚನೆಯನ್ನು ಕಳಿಸಿಕೊಡಬೇಕು.

ಶ್ರೀ ಆರ್. ಧರಂ ಸಿಂಗ್ :– ನಾನು ಆದೇಶ ಕೊಡುತ್ತೇನೆ.

## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

## ಅಂಗನವಾಡಿ ಕೇಂದ್ರ ತೆರೆಯುವ ಬಗ್ಗೆ

618. ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ–ಮೂಡಬಿದ್ರೆ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆಗೆಯದೆ ಇರುವ ತಾಲ್ಲೂಕುಗಳಾವುವು?

ಆ) ಹಾಗಿದ್ದಲ್ಲಿ ಈ ತಾಲ್ಲೂಕಿಗೆ ಇದರ ಪ್ರಯೋಜನ (ಸೌಲಭ್ಯ) ಸಿಗದಿರಲು ಕಾರಣಗಳೇನು?

ಇ) ಹಾಗಿದ್ದಲ್ಲಿ, ಈ ಸೌಲಭ್ಯ ಒದಗಿಸಲು ಕೂಡಲೇ ಕ್ರಮಕೈಗೊಳ್ಳುವರೆ?

ಈ) ಈ ಸೌಲಭ್ಯ ಲಭ್ಯತೆಯ ಬಗ್ಗೆ ಈ ಹಿಂದೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ಮಂಗಳೂರು (ಗ್ರಾಮಾಂತರ) ತಾಲ್ಲೂಕು.

ಆ) ರಾಜ್ಯ ಸರ್ಕಾರದಿಂದ 88–89ನೇ ಸಾಲಿನಲ್ಲಿ ಮಂಗಳೂರು (ಗ್ರಾಮಾಂತರ) ತಾಲ್ಲೂಕು ಬಾಲ ವಿಕಾಸ ಯೋಜನೆ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಸದರೀ ಸಾಲಿನಲ್ಲಿ ಕೇಂದ್ರ ಸರ್ಕಾರ ಈ ತಾಲ್ಲೂಕನ್ನು ಐ.ಸಿ.ಡಿ.ಎಸ್. ಯೋಜನೆಗೆ ಒಳಪಡಿಸಿಲ್ಲ.

ಇ) ಕೇಂದ್ರ ಸರ್ಕಾರವು ಈ ಯೋಜನೆಯನ್ನು ಹಂತ ಹಂತವಾಗಿ ರಾಜ್ಯದ ಎಲ್ಲಾ ತಾಲ್ಲೂಕಿಗೂ ವಿಸ್ತರಿಸುವ ಕಾರ್ಯಕ್ರಮವಿದೆ.

ಈ) ಮಂಗಳೂರು (ಗ್ರಾಮಾಂತರ) ತಾಲ್ಲೂಕನ್ನು ಆದ್ಯತೆ ನೀಡಲು ಗಿರಿಜನ ಉಪಯೋಜನೆಯಡಿ ಸೇರಿಸಿದೆ.

ಉ) ಈ ತಾಲ್ಲೂಕಿನ ಹಿನ್ನೆಲೆ ವಿವರಗಳೊಂದಿಗೆ 88–89 ಹಾಗೂ 89–90ನೇ ಸಾಲಿನಲ್ಲಿ ಐ.ಸಿ.ಡಿ.ಎಸ್. ಯೋಜನೆಗೆ ಒಳಪಡಿಸುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು.